ಶ್ರೀ ಎಂ. ಎಂ. ಪಾಟೀಲ್.—ಈ ಕಾರ್ಯವನ್ನು ತ್ವರಿತಗೊಳಿಸಲು ಪೀಸ್‌ವರ್ಕ್ ಮೇಲೆ ಮಾಡಬೇಕೆಂದು ಹುಕುಂ ಮಾಡಲಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಪೀಸ್‌ವರ್ಕ್ ಮೇಲೆ ತೆಗೆದುಕೊಳ್ಳಬೇಕೆಂದು ಹುಕುಂ ಕೊಟ್ಟಿಲ್ಲ. ತಾವು ಈ ನಫೆಯಲ್ಲಿ ತಿಳಿಸಿದ ಮೇಲೆ, ಜನಗಳಿಗೆ ಕೆಲಸವಿಲ್ಲ, ಕ್ಷಾಮ ಪರಿಸ್ಥಿತಿ ಇದೆ ಎಂದು ಹೇಳಿದ ಮೇಲೆ, ಆಗ್ಗೆ ಪ್ರೈಮಿನರಿ ವರ್ಕ್‌ನ ಪೀಸ್‌ವರ್ಕ್ ಮೇಲೆ ಮಾಡಿಸಿ ಎಂದು ಹೇಳಿ ಹುಕುಂ ಕೊಟ್ಟಿತು. ಜನ ಬರುತ್ತಾ ಇಲ್ಲ ಎಂದು ರಿಪೋರ್ಟ್ ಬಂದಿದೆ. ತಾವು ಮೊದಲು ವಾರಕ್ಕೆ ಒಂದು ಸಾರಿ ಕೊಡಿಸಿದರೆ ಹೆಚ್ಚಾಗಿ ಬರುತ್ತಾರೆ ಎಂದು ಹೇಳಿದ್ದಿರಿ.

ಶ್ರೀ ಎಂ. ಎಂ. ಪಾಟೀಲ್.—ಈ ಕಾರ್ಯ ನಿಧಾನವಾಗುವುದಕ್ಕೆ ಅನಕ್ಷರತೆ ಮತ್ತು ಕೂಲ ಕೊಡುವಷ್ಟು ನರಿಯಾಗಿ ಕೊಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ವರೆಗೂ ಬಂದಿಲ್ಲ. ಈಗ ಮಾನ್ಯ ಸದಸ್ಯರು ಸೂಚನೆ ಕೊಟ್ಟಂತೆ, ವಿಷಯ ಏನು, ಏಕೆ ನಿಧಾನವಾಗಿದೆ ಎಂಬುದನ್ನು ಕೂಲಂಕುಷವಾಗಿ ಪರಿಶೀಲನೆಮಾಡಿ, ಅಧಿಕಾರಿಗಳ ಬಗ್ಗೆ ತಂದರೆ ಸೂಕ್ತ ಕಾರ್ಯಕ್ರಮವನ್ನು ತೆಗೆದು ಕೊಳ್ಳುವುದಕ್ಕೆ ಅಭ್ಯಂತರವಿಲ್ಲ.

---

## Construction of Maternity Ward at Mercara.

*Q.—243. Sri S. KARIAPPA (Virupakshipur).—

Will the Government be pleased to state :—

(*a*) the date of commencement and completion of the Maternity Ward at Marcara and the date when it was opened by the Chief Minister during the year 1958 ;

(*b*) the name of the contractor of the building ;

(*c*) the quality and quantity of teak wood supplied to him departmentally for the work ;

(*d*) the exact quantity that was required for the purpose ;

(*e*) whether any complaint or report was received against the contractor in respect of the kind of timber used for the building ?

*A.*—Sri H. M. CHANNABASAPPA (Minister for Public Works and Electricity).—

(*a*) Date of commencement—August 1955.

Date of completion—December 1958.

Date of opening by Chief Minister—18th December 1958.

(*b*) M/s. V.M.S. Rao Talithaya & Co., Mangalore.

(*c*) 3,890 C.ft. in logs.

(*d*) 3,859 C.ft. in logs.

(*e*) Yes.

ಶ್ರೀ ಎಸ್. ಕರಿಯಪ್ಪ.—ಇದಕ್ಕೆ ಉಪಯೋಗಿಸಿರ ತಕ್ಕ ಮರ ತೇಗದಮರ ಅಲ್ಲ; ಬೇರೆ ಜಾತಿಯ ಮರ ಎಂದು ದೂರು ಬಂದಿದೆ ಎಂಬುದನ್ನು ಒಪ್ಪಿಕೊಂಡ ಮೇಲೆ ಅದರ ವಿಷಯದಲ್ಲಿ ವಿಚಾರಣೆ ಮಾಡಿದ್ದೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಫಲತಾಂಶವೇನು ?

ಶ್ರೀ ಎಚ್. ಎಂ ಚನ್ನಬಸಪ್ಪ.—ಪೂರ್ತಿ ಆಗಿಲ್ಲ. ಕೆಲವು ಭಾಗ ಪರಿಶೀಲನೆಮಾಡಿದ್ದರಲ್ಲಿ ಪ್ರೈಮಾಫೇಸಿ ಬೇರೆ ಮರ ಉಪಯೋಗಮಾಡಿದೆ ಎಂದು ರಿಪೋರ್ಟ್ ಬಂದು detailed investigation ಮಾಡಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಅದಕ್ಕೆ ಎಷ್ಟು ಮರಗಳನ್ನು ಉಪಯೋಗಿಸಬೇಕೋ ಅದಕ್ಕಿಂತಲೂ ಜಾಸ್ತಿ ಮರಗಳನ್ನು ಕೊಟ್ಟಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನರಿಯಲ್ಲ. ನುಮಾರು 18 ಘನ ಅಡಿಯಷ್ಟು ಹೆಚ್ಚು ಮರ ಹೋಗಿವೆ ಎಂದು ಅಂದಾಜಾಗಿದೆ. ನಾವು ಕೊಟ್ಟಿದ್ದಕ್ಕೂ ಉಪಯೋಗ ಆಗಿರತಕ್ಕದ್ದಕ್ಕೂ 18 ಘನ ಅಡಿ ಹೆಚ್ಚು ಕಡಮೆ ಆಗಿದೆ. ಅದರ ಬೆಲೆಯನ್ನು ಕಂಟ್ರಾಕ್ಟರಿಂದ ಉತ್ತಾರಮಾಡಿಕೊಳ್ಳುತ್ತೇವೆ

ಶ್ರೀ ಎಸ್. ಕರಿಯಪ್ಪ.—ಮರವನ್ನು ಕೊಡುವಾಗ ವೇಸ್ಟೇಜ್ ಎಷ್ಟು ಪರ್ಸೆಂಟ್ ಬಿಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಮಂಜೂರಾದ ಕಾಲದಲ್ಲಿ ಹಿಂದಿನ ಕೊಡಗು ಸರ್ಕಾರ ಮಂಜೂರುಮಾಡುವಾಗ ಕಲೆಕ್ಟರ್ ಆಫ್ ಫಾರೆನ್ಸ್ ಅವರು ಶೇಕಡ 60 ರಂತೆ ಕೊಡಬೇಕೆಂದು ಆಜ್ಞೆ ಮಾಡಿದ್ದರು. ಅದರ ಮೇಲೆ ಮರ ಕೊಟ್ಟಿದೆ.

Sri K. P. KARUMBAYYA.—Is it a fact that the contractor has used such inferior specie of timber as Mathi and Nandi whose market value is so low . . .

Sri H. M. CHANNABASAPPA.—I have already said that it is under investigation. If it is proved that the contractor has used rotten materials, due action will be taken both against the contractor and the officer in charge.

---